ದಿನ ಪತ್ರಿಕೆ
Reg No. M 1299
Daily & Weekly

This Space is available for Adv t.

SATYAVADI Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 3011] ಬುಧವಾರ 26—5—1943 [3 ಪೈ

Opera — Aryamala
ಅಪೆರಾ——
2 ನೇ ಅಮೋಘ್ವಾರ
ಆರ್ಯಮಾಲ
ಪಿ. ಯು. ಚಿನ್ನಪ್ಪ, ಸಂತಾನಲಕ್ಷ್ಮಿ
ಶಕುಂತಲ, ಕೃಷ್ಣ, ಮಧುರಂ
ಮುಂತಾದವರು ಪಾತ್ರವಹಿಸಿರುವರು

ಲಂಡನ್ ಬಾಂಬುಸುರಿಮಳೆ

ಯಹೂದ್ಯರ ಗೋಳು ತಪ್ಪಲಿಲ್ಲ

ಬಲ್ಗೇರಿಯಾದಿಂದ 20 ಸಾವಿರ ಯಹೂದ್ಯರನ್ನು ಗಡೀಪಾರು ಮಾಡಲಿರುತ್ತಾರೆ.

ಸರಪಣಿಗೆ ಸೊನ್ನೆ

ರೂಹರ್ ಪ್ರದೇಶದಲ್ಲಿ ಎರಡು ಅಣೆಕಟ್ಟನ್ನು ಬ್ರಿಟಿಷ್ ವಿಮಾನಗಳು ನಾಶಮಾಡಿದ್ದರಿಂದ ಕೈಗಾರಿಕೆ ಕೇಂದ್ರಕ್ಕೆ ಸರಪರಾಜು ಒದಗುವುದು ನಿಂತಿದೆ.

ಬರ್ಮ ದಂಡಯಾತ್ರೆ

ಚಿಟ್ಗಾಂಗಲದಲ್ಲಿ ಬರ್ಮ ಮೇಲೆ ದಂಡಯಾತ್ರೆ ನಡೆಯಲು ಸಿದ್ಧತೆ ನಡೆಯುತ್ತಿದೆ.

ಇಟಲಿ

ಇಟಲಿಯು ಹೊರಿಗಿದ್ದ ತನ್ನ ಸೇನೆಯನ್ನೆಲ್ಲಾ ಸ್ವದೇಶವನ್ನು ಕಾಪಾಡಿಕೊಳ್ಳಲು ಹಿಂದಕ್ಕೆ ಕರೆಸಿಕೊಂಡಿದೆ. ಜರ್ಮನಿಯು ಹೆಚ್ಚಾಗಿ ವಿಮಾನ ಕಳುಹಿಸಬೇಕೆಂದು ಗಲಾಟೆ ಮಾಡುತ್ತಿದೆ. ಜರ್ಮನಿ ಸೇನೆಯು ಈಗ ಸಾರ್ಡಿನಿಯಾಕ್ಕೆ ಬಂದಿದೆ. ಇಲ್ಲಿಗೆ ಜರ್ಮನಿಯು ಕಾಲಿಡಲು ಇದೆ ಮೊದಲು. ವಿಜಯಿ ಸಮುದ್ರದ ಮೇಲೆ ಬ್ರಿಟಿಷ್ ವಿಮಾನಗಳು ಗೊತ್ತುಗುರಿಯಿಲ್ಲದ ಹಾಗೆ ಓಡಾಡುತ್ತಿವೆ ಅಧಿಕರೂಢಿಲ್ಲಿ ತಮಗೆ ನಷ್ಟವಾಗಿದೆಂದು ಇಟಲಿಯೇ ಒಪ್ಪಿಕೊಳ್ಳುತ್ತದೆ. ಸಾರ್ಡಿನಿಯಾ, ಸಿಸಲಿ, ಕ್ಯಾಲಬ್ರಿಯದಿಂದ ಇಟಲಿಯವರ ವೃತ್ತಾದ ಕಡೆ ಓಡಿಸುತ್ತಿರುವರ. ಒಂದು ಶತ್ರು ನೌಕೆಯು ಮುಳುಗಿತು.

ಭಂಗಾರ ಬೆಳ್ಳಿ ಧಾರಣೆ

ಸವರ್ಣ	ರೂ.	61—4—0
ಬಂಗಾರ ತೊಲ	ರೂ.	6—8—
ಬೆಳ್ಳಿ	,,	1—5—

ಲಂಡನ್, ಮೇ 24 ನಿನ್ನೆ ಶತ್ರು ಸ್ವಾಸ್ಥ್ಯದಮೇಲೆ ಆರ್. ಎ. ಎಫ್. ನವರು ಭಾರಿ ಧಾಳಿ ನಡೆಸಿದರು. ರುಹರ್‌ದಲ್ಲಿನ ಉತ್ತಮ ರಕ್ಷಣಾ ವ್ಯವಸ್ಥೆಗಳು ಮೂಲೋತ್ಪಾಟನ ಮಾಡಲ್ಪಟ್ಟಿತು. 2000 ಟನ್ ಮೇಲಿಟು ಬಾಂಬು ಸುರಿಮಳೆ ನಡೆಸಲಾಯಿತ.. ಶತ್ರುಗಳ 28 ವಿಮಾನಗಳು ಕಾಣೆಯಾಗಿದೆ. ಶತ್ರುಗಳಿಗೆ ತುಂಬಾ ನಷ್ಟ ಉಂಟುಮಾಡಲಾಗಿದೆ. ಡಾರ್‌ಮಾಂಡಿನ ಧಾಳಿಯಲ್ಲಿ ಮಿತ ಮಂಡಲಯು 500 ವಿಮಾನಗಳಿದ್ದವು. ಇಲ್ಲಿಯವರೆಗೆ ಜರ್ಮನಿಯ ಮೇಲೆ ಹಾಕಿರುವ ಬಾಂಬುಗಳು 1 ಲಕ್ಷ ಟನ್ ಮೇಲ್ಪಟ್ಟ ಬಾಂಬುಗಳು ಸುರಿಯಲಾಗಿದೆ

ಅಟ್ಲಾಂಟಿಕ್ ಕದನ

ಅಟ್ಲಾಂಟಿಸಲ್ಲಿ ಹೊಡೆದಾಟ ಜೋರಾಗಿದ್ದು ಅಮೇರಿಕನರು ಜಪಾನರ ಮೇಲೆ ಒತ್ತಾಯ ನಡೆಸುತ್ತಿದ್ದಾರೆ.

ಹೆಲಿಸ ಸ್ಪಾರ್ಟಿಗ್ರಾಡಿನ್

ಮಿ|| ಜೋಸೆಫ್ ಡೇವಿಸ್‌ರವರ್ ಮುಂದಿನ ಜನಾಂಗಕ್ಕೆ ಸ್ಪಾರ್ಟಿಯನ್ ಗ್ರಾಡ್ ಚರಿತ್ರೆ ತಿಳಿಯಲು ಅದನ್ನು ಈಗಿರುವ ಹಾಗೆ ಬಿಡಬೇಕೆಂದುದು 5 ಮೈಲಿ ದೂರದಲ್ಲಿ ಹೊಸ ಪಟ್ಟಣವನ್ನು ಕಟ್ಟಬೇಕೆಂದು ಸಲಹೆ ಮಾಡಿರುವರು.

ಬ್ರಿಟ್ ಮೆಲೆ ಧಾಳಿ

23 ನೇ ತಾರೀಕಿನ ದಿನ ಶತ್ರುಗಳು ಬ್ರಿಟ್ ದೇಶದ ಮೇಲೆ ಬಾಂಬುಗಳು ಹಾಕಿದವು, ಸಾವು ನೋವು ತಕ್ಕ ಮಟ್ಟಿಗಿದ್ದಿತು.

ಸಭಾಸ್ಥಾಪನೆಯಲ್ಲಿ ನಂಬಿಕೆ

ಉಜಿಪ್ಟಿನ ಚೆಂಬರ್‌ನಲ್ಲಿ 5 ದಿನದ ನಡೆದ ನಂತರ ಸಕಾರದಲ್ಲಿ ನಂಬಿಕೆ ಇರುವಿ ॥ ಫಿಲಿಪ್ಸ್

ವಾಷಿಂಗ್ಟನ್ನಿನಲ್ಲಿ ಮಿ ॥ ಫಿಲಿಪ್ಸ್ ರವರು ಕಾರ್ಡಿನಲ್ ಹಲ್, ರೂಸ್ವೆಲ್ಟ್ ಚರ್ಚಿಲ್ ಇವರನ್ನೆಲ್ಲಾ ನೋಡಿ, ಭಾರತದ ಸ್ಥಿತಿಗತಿಯನ್ನು ತಿಳಿಸಿದರು.

ಮಿ|| ಫಿಲಿಪ್ಸ್‌ರವರು ಇನ್ನು ಕೆಲವು ವಾರದಲ್ಲಿ ಭಾರತಕ್ಕೆ ಬರುವುರೆಂದು ಗೊತ್ತಾಗಿದೆ.

ಇಟಲಿಯ ದುಸ್ಥಿತಿ

ಇಟಲಿಯಲ್ಲಿ ಕಚ್ಚಾಸಾಮಗ್ರಿಗಳು ಇಲ್ಲವಾವ್ದರಿಂದ ಯುದ್ಧೋದ್ಯಮವು ಸಾಮಗ್ರಿಗಳ ತಯಾರಿಕೆಯು ಕಡಮೆಯಾಗಿದೆ.

ಯುದ್ಧಾನಂತರ

ಯುದ್ಧ ಮುಗಿದನಂತರ ಕರಾಚಿ ಡೇಲಿ ಗೆಜೆಟ್ ಸಂಪಾದಕರಾದ ಮಿ ॥ ಶರ್ಮರು ಭಾರತದ ವಿಷಯವಾಗಿ 3 ಗ್ರಂಥಗಳನ್ನು ಬರೆದು ಅಮೇರಿಕಾದ ಒಂದು ಪ್ರಕಟಣಾ ಸಂಸ್ಥೆಗೆ ಕೊಡುವರೆಂದು ಗೊತ್ತಾಗಿದೆ

ಹಿಂಡಿ ಮೇಲೆ ಪ್ರತಿಬಂಧಕ

ಬೊಂಬಾಯಿ ಪ್ರಾಂತ್ಯದಲ್ಲಿ ಯಾವ ಎಣ್ಣೇ ಬೀಜದ ಹಿಂಡಿಯನ್ನು ಸೌದೆಯಾಗಿ ಉಪಯೋಗಿಸುವುದನ್ನು ಸರ್ಕಾರದವರು ಪ್ರತಿಬಂಧಿಸಿದ್ದಾರೆ.

ರಷ್ಯಾ ದಿನ

ಬ್ರಿಟಿಷರಿಗೂ ರಷ್ಯದವರಿಗೂ ಸ್ನೇಹ ಬೆಳೆದ ದಿವಸವಾದ್ದರಿಂದ ನಿನ್ನೆ ಇಂಗ್ಲೆಂಡಿನಲ್ಲಿ ರಷ್ಯಾ ದಿವಸವು ಬಹು ವಿಜೃಂಭಣೆಯಿಂದ ಜರುಗಿತು.

ಬವೇರಿಯ ಉತ್ತರ ಭಾಗದಲ್ಲಿರುವವರೂ ಬ್ರಿಟಿಷ್ ವಿಮಾನಧಾಳಿಗೆ ಹೆದರಿ ಆಪ್ರಾಂತ್ಯಗಳನ್ನು ಬಿಡುತ್ತಿರುವರು.

ಕೆನಡಾಕ್ಕೆ ರೂಸ್ವೆಲ್ಟರು

ಸದ್ಯದಲ್ಲಿ ಮಿ|| ರೂಸ್ವೆಲ್ಟರು ಒಟ್ಟಾವಿಕ್ಕೆ ಹೋಗುವರೆಂದು ಒಟ್ಟಾವ ಸಮಾಚಾರ ತಿಳಿಸುತ್ತಿದೆ.

ಅಶಾಂತಿ

ಫ್ರೆಂಚ್ ನಾರ್ತ್‌ನಲ್ಲಿ ಅಶಾಂತಿ ಹೆಚ್ಚಿ 7 ಜನರನ್ನು ಕೊಂದಿದ್ದಕ್ಕಾಗಿ ಜನರ್ವಸಿಯನರು 200 ಫ್ರೆಂಚ್ ಜನರನ್ನು ದಸ್ತಗಿರಿ ಮಾಡಿರುವರು.

ಅಚ್ಚಿನಲ್ಲಿದೆ ! ಎದುರುನೋಡಿ !
ಚಿತ್ರಪತ್ರಿಕಾಪ್ರಪಂಚದಲ್ಲಿ
ನೂತನ ಸಾಹಸ
ಚಿತ್ರಪಟ
(ಸಚಿತ್ರ)
(ಅದರ ವ್ಯಕ್ತಿಗಳ ಜೀವನ ಪರಿಚಯ)
ಭಾರತದ ಚಲನಚಿತ್ರ ಪ್ರಪಂಚದ—
ದಿಗ್ದರ್ಶಕರು,
ನಿರ್ಮಾಪಕರು
ನಟರು
ನಟಿಯರುಗಳ
ಸಂಪೂರ್ಣ ಜೀವನ ಚರಿತ್ರೆ
ಅವರು ಈ ಸಿನಿಮಾ ಪ್ರಪಂಚಕ್ಕೆ ಕಾಲಿಡುವ ಮೊದಲು ಹೇಗಿದ್ದರು ?
ಇವೇ ಮೊದಲಾದ ಸಂಗತಿಗಳಿರುವ
೧೦೦ ಪುಟಗಳಿಗೆ
ಮಿಗಿಲಾಗಿ
ಸುಂದರ ತ್ರಿವರ್ಣ ಹೊದಿಕೆ
ಯೊಂದಿಗೆ ಹೊರಬೀಳಲಿದೆ
— ನಿಮ್ಮ ಪ್ರತಿಯನ್ನು ಕಾದಿಡಿ —
ಸಂಪಾದಕರು ಮತ್ತು ಪ್ರಕಾಶಕರು—
ಎಸ್. ವಿ. ಕೃಷ್ಣಸ್ವಾಮಿ
360 ಡಿ. ಸುಬ್ಬಯ್ಯ ರೋಡು ಮೈಸೂರು
ಪಿ. ಸಂಪತ್ಕುಮಾರ್ ಮೆನೇಜರ್
ಹೊಸ ಅರಮನೆ ಮೈಸೂರು
ಸತ್ಯವಾದಿ ಇವರಲ್ಲಿ ಪಡೆಯಬಹುದು.

ಚೈನಾ —

ವಿಮಾನ ಧಾಳಿಯಲ್ಲಿ

ಲಂಡನ್ ಇಂಗ್ಲೆಂಡ್ ಅಲ್ಲ. ಜಾಂಕಿಂಗ್ ಚೈನಾ ಅಲ್ಲ. ಈಗ ಪ್ರಪಂಚದ ಕಣ್ಣು ಲಂಡನ್, ಜಾಂಕಿಂಗ್ ಮೇಲಿದೆ. ಇಂಗ್ಲೆಂಡೋ ಚೈನಾವೋ ಅವುಗಳ ರಾಜಧಾನಿಯಲ್ಲದೆ ಇತರ ಭಾಗಗಳಲ್ಲಿಯೂ ವಿಮಾನ ಧಾಳಿಯಾಗುತ್ತಿರುವುದು. ಚೀನಿಯರ ಪಟ್ಟಣದ ಮೇಲೆ ಯಾವ ರೀತಿ ವಿಮಾನ ಧಾಳಿಯಾಗುವ ಇದೊಂದು ದೃಶ್ಯ. ಈಗ ಚೀನಾದ ರಾಜಧಾನಿ ಚುಂಕಿಂಗ್ ಎಂದೂ ಈ ರಾಜಧಾನಿಗೆ ಪೂರ್ವದಲ್ಲಿ 250 ಮೈಲಿ ದೂರದಲ್ಲಿ ಜೆಂಗ್ಟು ಎಂಬ ಪಟ್ಟಣವಿದೆ ಇದೇ ಸರಿಯಾದ ರಾಜಧಾನಿ ಎನ್ನಬಹುದು. ಇಲ್ಲಿರತಕ್ಕವರು ವರ್ತಕರು. ನಾಜೂ ಕಾಗಿ ಕೆತ್ತನೆ ಕೆಲಸಮಾಡುವವರು, ಸರ್ಕಾರಿ ಕೆಲಸಗಾರರು, ಸುತ್ತಮುತ್ತಲು ಬೆಳೆದ ದವಸಗಳನ್ನು ತಂದು ಮಾರುವರು ಇವರೇ ಇಲ್ಲಿನ ವಾಸಸ್ಥರು. ಯುದ್ಧವಾದಾಗಿನಿಂದ ಚೈನಾದಲ್ಲಿ ಸುಮಾರು ಆರು ವಿಶ್ವವಿದ್ಯಾನಿಲಯಗಳು ಈ ಜೆಂಗ್ಟು ಪಟ್ಟಣಕ್ಕೆ ಬಂದಿರುವುದು. ಈ ಜೆಂಗ್ಟು ನಗರವನ್ನು ಪಶ್ಚಿಮ ಚೈನಾದ ಪೀಕಿಂಗ್ ಎಂದು ಚೀನಿಯರು ಈಗ ಕರೆಯುತ್ತಾರೆ.

ಜನರು ಹೆದರುವುದಿಲ್ಲ—

ಬೇಸಿಗೆಯಲ್ಲಿ ಒಂದು ದಿನ ಬೆಳಿಗ್ಗೆ ವಿಮಾನ ಧಾಳಿಯಾಗುವ ಘಟನೆ ಕೂಗಿ ತ್ತೆಂದುಕೊಳ್ಳುವ ಆಗ ಜನರು ಗಾಬರಿಯಾಗುವುದಿಲ್ಲ. ಜನರಿಗೆ ಆಶ್ಚರ್ಯವೂ ಆಗುವುದಿಲ್ಲ. ವಿಮಾನ ಧಾಳಿ ಮಾಮೂಲ್ ಅಂದರೆ ನಾವು ಪ್ರತಿದಿವಸವೂ ಚಂಡಿನ ಆಟವಾಡುವ ಹಾಗೆ, ಸಿನಿಮಾಗೆ ಹೋಗುವ ಹಾಗೆ. ಸೂಂತಾರು ಮೈಲಿ ದೂರದಿಂದ ಜೆಂಗ್ಟುವಿಗೆ ಬರುವ ಸುಜುಯಾಂಗ್ ಡಿಸ್ಟ್ರಿಕ್ಟಿನ ಕಡೆಗೆ ಶತ್ರುಗಳ ವಿಮಾನ ಬರುತಿದೆಯೆಂದು ಆಕಾಶವಾಣಿಯಲ್ಲಿ ಹೇಳುವುದು. ಆಗ ಜೆಂಗ್ಟು ಪೋಲೀಸ್ ವರು ಊರಿನಲೆಲ್ಲಾ ಹಳದಿ ಬಾವುಟವನ್ನು ಏರಿಸುವರು. ಊರಿನ ಎತ್ತರವಾದ ಸ್ಥಳದಲ್ಲಿ ದೊಡ್ಡದಾದ ಗಳಿನ ಮೇಲೆ ಕೆಂಪು ಬೆಲೂನಿನನ್ನು ನೇತು ಹಾಕುವರು. ಶತ್ರುವಿನ ವಿಮಾನ ಜಾಂಕಿಂಗ್ ಆಚೆ ಹೋಗಲಾರದಾದ್ದರಿಂದ ಜನರೆಲ್ಲರೂ ತಮ್ಮ ತಮ್ಮ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ. ಈ ಧಾಳಿಯು ಯೋಜನೆಯನ್ನೇ ಮಾಡುವುದಿಲ್ಲ.

ವರ್ತಮಾನ ಸಂಗ್ರಹ

—o—

ಈಚೆಗೆ ಭಾರತ ಸೇನೆಗಳು ಬರ್ಮಾದಲ್ಲಿ ಸಡಿಸಿದ ಪರಾಕ್ರಮವು ಅನುಭವದಿಂದ ಕಾಡು ಯುದ್ಧದಲ್ಲಿ ಶಿಕ್ಷಣ ಕೊಡುವುದಾಗಿಯೂ ಇನ್ನೊಂದಾವೃತ್ತಿ ಇದೇ ತರಹ ಮಾಡಬೇಕೆಂದು ಬರ್ಮಾ ಯುದ್ಧದ ಸೇನಾಪತಿಯವರು ಹೇಳುವರು.

o o

ಈಚೆಗೆ ಸರ್ಕಾರದವರು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನೂ, ಶ್ರೀಮತಿ ಇಂದಿರ ಗಾಂಧಿಯವರನ್ನೂ ಬಿಡುಗಡೆ ಆವರುಗಳು ತಮ್ಮ ತಮ್ಮ ಮನೆಗಳಲ್ಲಿ ವಾಸವಾಗಿದ್ದುಕೊಂಡು ಅಲ್ಮೋರಾದ ಮಾಜಿಸ್ಟ್ರೇಟರಿಂದ ಪರಿಶೀಲಿಸಿಡಲು ಸಿದ್ಧರಾಗಬೇಕೆಂದು ಷರತ್ತು ವಿಧಿಸಿದ್ದರಷ್ಟೆ? ಇದಕ್ಕೆ ಇವರಿಬ್ಬರು ಈ ಷರತ್ತಿಗೆ ಒಪ್ಪುವುದಿಲ್ಲವೆಂದು ಹೇಳಿರುವರು.

o o

ಅಮೇರಿಕಾಕ್ಕೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಇಬ್ಬರು ಹೆಣ್ಣು ಮಕ್ಕಳು ವಿದ್ಯಾಭ್ಯಾಸಕ್ಕೆ ಪ್ರಯಾಣ ಮಾಡಿದರು.

o o

ಯುದ್ಧ ಮುಗಿದನಂತರ ಸಂಯುಕ್ತ ರಾಷ್ಟ್ರಗಳ ಸಂಘಟನೆಯಾಗುವುದೆಂದು ಡಾ|| ಜೆಸಿಸ್ಟರವರು ವಾಷಿಂಗ್ಟನ್‌ನಲ್ಲಿ ಹೇಳಿದರು.

o

ಸಿನ್ನೆ ಮಿ|| ಚರ್ಚಿಲ್ಲರು ವಾಷಿಂಗ್ಟನ್‌ನಲ್ಲಿರುವ ಬ್ರಿಟಿಷ್ ಎಂಬಸಿಯಲ್ಲಿ 30 ಕಾಂಗ್ರೆಸ್ ಸದಸ್ಯರಿಗೆ ಔತಣಕ್ಕೆ ಕರೆದಿದ್ದರು.

o o

ಟುನಿಷಿಯದ ಯುದ್ಧದಲ್ಲಿ ಈಗ ತಿಳಿದಿರುವ ಪ್ರಮಾಣಕ್ಕೆ 224 ಸಾವಿರ ಖೈದಿಗಳೆಂದು ಅವರಲ್ಲಿ 125 ಸಾವಿರ ಜರ್ಮನಿಯರೆಂದು ತಿಳಿಯಬರುತ್ತೆ.

o ವ

ರೂಹರ್ ಪ್ರಾಂತ್ಯದಲ್ಲಿ ಜರ್ಮನ್ ಪ್ರಜೆಗಳು ಗಾಬರಿಯಾಗಿರುವರು ಅಲ್ಲಿ ಈಚೆಗೆ ಬ್ರಿಟಿಷರು ಎರಡು ಆಣೆಕಟ್ಟನ್ನು ಒಡೆದದ್ದರಿಂದ ವಿಶೇಷ ನಷ್ಟವಾಯಿತಲ್ಲವೆ? ಹೆಂಗ್ ಹಿಮ್ಲರ್‌ಗೆ ವಿಶೇಷ ಅಧಿಕಾರ ಕೊಟ್ಟರುವರು. ಈ ಗಲಭೆಯನ್ನು ತಗ್ಗಿಸುವುದಕ್ಕೋಸ್ಕರ ಈ ಅಧಿಕಾರಕ್ಕೆ ಹಿಟ್ಲರ್‌ನ ಅನುಮತಿ ಸಹಾ ದೊರಕಿತು.

ಸಂಸ್ಥಾನದ ಸುದ್ದಿ

—o—

ಮೈಸೂರು ನಗರದಲ್ಲಿ ಅಕ್ಕಿ ರಾಗಿಗೆ ಅಭಾವವಿದೆ.

ಮೈಸೂರು ಜಿಲ್ಲೆಯಿಂದ ಆಹಾರ ಸಾಮಗ್ರಿಗಳನ್ನು ಸಾಗಿಸುತ್ತಿದ್ದದ್ದಕ್ಕೆ 5896 ರೂಪಾಯಿ ದಂಡ ಈ ವರೆವಿಗೆ ವಸೂಲಾಗಿದೆ.

ಅನೆಕಲ್ ತಾಲ್ಲೂಕಿಗೆ ನೀರನ್ನು ಒದಗಿಸಲು ಸರ್ಕಾರದವರು 15 ಸಾವಿರ ರೂಪಾಯಿ ಗ್ಯಾರಂಟನ್ನು ಕೊಟ್ಟಿರುತ್ತಾರೆ.

ಶ್ರೀಮನ್ಮಹಾರಾಜರು ಬೆಂಗಳೂರಿನಲ್ಲಿ ಜೂನ್ 6 ರಿಂದ 15 ರ ವರೆವಿಗೆ ನಡೆಯುವ ಯುದ್ಧ ಪ್ರದರ್ಶನದ ಆರಂಭೋತ್ಸವ ನೆರವೇರಿಸುವರೆಂದು ಗೊತ್ತಾಗಿದೆ.

ದಿವಾನರು ಈಗ 20 ದಿನಗಳಿಂದಲೂ ಅಸ್ವಾಯಿಲಿಯಾಗಿರುತ್ತಾರೆ ಜೂನ್ 1 ರಿಂದ ಬೆಂಗಳೂರಿನಲ್ಲಿ ಅಸೆಂಬ್ಲಿ ಅಧಿವೇಶನವು ನಡೆಯುವುದರಿಂದ ದಿವಾನರಿಗೆ ಇದೇ 20 ರಿಂದ 31 ರ ವರೆಗೆ ರಜಾವನ್ನು ಶ್ರೀಮನ್ಮಹಾರಾಜರು ದಯಪಾಲಿಸಿರುತ್ತಾರೆ. ಈ ಕಾಲದಲ್ಲಿ ಮೊದಲನೆ ಕೌನ್ಸಿಲರು ಮಿ|| ಕೆ. ವಿ. ಅನಂತ ರಾಮ್ಮರವರು ತಮ್ಮ ಕೆಲಸದ ಜೊತೆಗೆ ದಿವಾನರ ಕೆಲಸವನ್ನೂ ಸಹ ನೋಡಿಕೊಳ್ಳುವರು. ಡಾಕ್ಟರ್ ಸಿ. ಕೃಷ್ಣಸ್ವಾಮಿಯವರು ದಿವಾನರನ್ನು ನೋಡಿಕೊಳ್ಳುತ್ತಿರುವರು.

ಶ್ರೀ ಲಕ್ಕೂರ್ ವೆಂಕಾಜೀರಾಯರು ಆಯುರ್ವೇದ ವಸ್ತು ಯುನಾನಿ ವೈದ್ಯಕೀಯ ಪದ್ಧತಿಗೆ ಪ್ರೋತ್ಸಾಹಕರವಾಗಿ 1 ಲಕ್ಷ ರೂಪಾಯಿ ಕೊಟ್ಟದ್ದಕ್ಕಾಗಿ ಬೆಂಗಳೂರಿನ ಮಹನೀಯರುಗಳು ಒಂದು ಸತ್ಕಾರವನ್ನು ಏರ್ಪಡಿಸಿ, ಶ್ರೀವಾಣಿ ವೆಂಕೋಜಿರಾಯರನ್ನು ಕೊಂಡಾಡಿದರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರು ಭಾರತೀಯದ ಅಧಿವೇಶನದಲ್ಲಿ ಭಾಗವಹಿಸುವುದಿಲ್ಲವೆಂದು ತೀರ್ಮಾನಿಸಿದ್ದಾರೆ.

ಸತ್ಯವಾದಿ ಪತ್ರಿಕೆಗೆ

ಚಂದಾದಾರರಾಗಿರಿ

ತಿಂಗಳಿಗೆ 0—6—0

ಅಕ್ಕರ ಸಾರ್ವಜನಿಕ ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್ ಮೈಸೂರು

For All Kinds of
Printing & Binding

The Satyavadi Press

Chamarajapuram
Mysore

ಅಸೆಂಬ್ಲಿ ಕಾಂಗ್ರೆಸ್ ಪಾರ್ಟಿ ಲೀಡರ್ ಶ್ರೀ ಚಂಗಲರಾಯರೆಡ್ಡಿಯವರು ಪೆರೋಲ್ ಮೇಲೆ ಬಿಡುಗಡೆ ಮಾಡಲ್ಪಟ್ಟಿದ್ದಾರೆ.

ಶಿವಮೊಗ್ಗದ ಶ್ರೀ ನರಸಿಂಹ ಭಟ್ಟ ಮತ್ತು ರಾಮಕೃಷ್ಣಪ್ಪನವರು ಏನ್ನೊಂದು ಷರತ್ತಿಲ್ಲದೆ ಬಿಡುಗಡೆ ಮಾಡಲ್ಪಟ್ಟಿದ್ದಾರೆ.

ನಿನ್ನೆ ದಿವಸ ರಾಜಧಾನಿಯ ಅಶೋಕಾ ರಸ್ತೆಯಲ್ಲಿ ವೈಶ್ಯ ಅನಾಥಾಲಯದ ವಾರ್ಷಿಕೋತ್ಸವವು ನಡೆಯಿತು.

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ರಣಜಿತ್ ಟಾಕೀಸ್ RANJIT — UJALA

ಪ್ರತಿದಿನ 3 ಆಟಗಳು

ಹಿಂದೀ ಭಾಷೆ

ಸೌಂದರ್ಯ ಸೊಬಗಿನ ತಾರೆ ನಾಸೀಮ್ ಮತ್ತು ನಟಶ್ರೇಷ್ಠ ಪೃಥ್ವೀರಾಜ್ ಪಾತ್ರವಹಿಸಿರುವ

ಉಜಾಲ

ಸಹಾಯಕನಟರು { ರೆಹಬಾಯಿ, ವಿಷ್ಣುಮುಷ್ರಾಫ್ ಮುಬಾರಕ್ ಮುಂತಾದವರು